# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 781 (867) |
| ಮಾನ್ಯ ಸದಸ್ಯರು | ಶ್ರೀ ಟಿ.ಎನ್ ಜವರಾಯಿ ಗೌಡ (ವಿಧಾನಸಭಾ ಕ್ಷೇತ್ರ) |
| ಉತ್ತರಿಸುವ ದಿನಾಂಕ | 11-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ನೋಂದಣಿ ಕಾಯಿದೆಗೆ ತಂದಿರುವ ತಿದ್ದುಪಡಿಯಲ್ಲಿ ನೋಂದಾಯಿತ ಜನರಲ್ ಪವರ್ ಆಫ್ ಅಟಾರ್ನಿಗಳಿಗೆ ದಸ್ತಾವೇಜುಗಳ ನೋಂದಣಿಗೆ ಎಲ್ಲಾ ರೀತಿ ಮಾನ್ಯತೆ ನೀಡಿರುವುದು ನಿಜವೆ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರಿ ಆದೇಶ/ಸುತ್ತೋಲೆಯೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು; | ಕರ್ನಾಟಕ ಸರ್ಕಾರ (ವ್ಯವಹಾರ ನಿರ್ವಹಣೆ) ನಿಯಮಗಳು, 1977 ರನ್ವಯ ದಿನಾಂಕ:14.03.2025 ರಂದು ನಡೆದ ಸಚಿವ ಸಂಪುಟವು ನಿರ್ಣಯಿಸಿದಂತೆ, The Registration (Karnataka Amendment) Bill, 2025 (2025 ರ ವಿಧಾನ ಸಭೆಯ ವಿಧೇಯಕ ಸಂಖ್ಯೆ:13) ಗೆ ವಿಧಾನ ಮಂಡಲದ ಎರಡೂ ಸದನಗಳ ಅನುಮೋದನೆ ಪಡೆದು ದಿನಾಂಕ:22.07.2025 ರಂದು ಗೌರವಾನ್ವಿತ ರಾಷ್ಟ್ರಾಧ್ಯಕ್ಷರ ಸಹಮತಿ ಪಡೆದು ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 18 ಶಾಸನ 2025, ದಿನಾಂಕ: 28.07.2025 ರ ಮೂಲಕ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯ ಪತ್ರಿಕೆಯಲ್ಲಿ 2025 ರ ಕರ್ನಾಟಕ ಅಧಿನಿಯಮ ಸಂಖ್ಯೆ: 42 ಎಂದು ಅಧಿಸೂಚಿಸಲಾಗಿದೆ.<br><br>ಸದರಿ ಅಧಿಸೂಚನೆಯಲ್ಲಿ ನೋಂದಣಿ ಕಾಯ್ದೆ 1908ರ ಕಲಂ 17 ಮತ್ತು 33ರಲ್ಲಿ ತಿದ್ದುಪಡಿ ಮಾಡಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).<br><br>ನೋಂದಣಿ ಕಾಯ್ದೆ1908 ರ ಕಲಂ 17 ರಲ್ಲಿ ಕಡ್ಡಾಯವಾಗಿ ನೋಂದಣಿ ಮಾಡಬೇಕಾಗಿರುವ ದಸ್ತಾವೇಜುಗಳ ಬಗ್ಗೆ ವಿವರಗಳು ಇರುತ್ತದೆ. ಸದರಿ ಕಲಂ 17ರ ಉಪ ಪ್ರಕರಣ 17 (f) ಅನ್ನು ಮೇಲೆ ತಿಳಿಸಿರುವ ತಿದ್ದುಪಡಿಯಲ್ಲಿ ಸೇರಿಸಲಾಗಿರುತ್ತದೆ ಹಾಗೂ ಸದರಿ ಉಪ ಪ್ರಕರಣ ಈ ಕೆಳಕಂಡಂತೆ ಇರುತ್ತದೆ.<br><br>**17. Documents of which registration is compulsory.-**<br>"17(f) Power of attorney authorizing transfer of immovable property with or without consideration."<br><br>ಇದರ ಪ್ರಕಾರ ಅಧಿಕಾರ ಪತ್ರದಲ್ಲಿ (ಜನರಲ್ ಪವರ್ ಆಫ್ ಅಟಾರ್ನಿ) ಅಧಿಕಾರ ಕೊಡುವವರು ಅವರ ಸ್ವತ್ತನ್ನು ವರ್ಗಾವಣೆ /ಮಾರಾಟ ಮಾಡಲು ಪರಿಗಣನೆ/ಪ್ರತಿಫಲದ ಮೊತ್ತ ಪಡೆದು ಅಥವಾ ಪಡೆಯದೆ ಅಧಿಕಾರವನ್ನು ಕೊಟ್ಟಲ್ಲಿ ಅಂತಹ ಅಧಿಕಾರ ಪತ್ರಗಳು ಕಡ್ಡಾಯವಾಗಿ ನೋಂದಣಿ ಮಾಡಬೇಕಾಗಿರುತ್ತದೆ. |

ರಾಜ್ಯದಲ್ಲಿ ಈ ತಿದ್ದುಪಡಿಯನ್ನು ಜಾರಿಗೊಳಿಸಲು ಅಧಿಸೂಚನೆ ಸಂಖ್ಯೆ: DPAL 18 SHASANA 2025, ರಂತೆ ದಿನಾಂಕ:28-07-2025 ರಂದು ಹೊರಡಿಸಲಾಗಿದ್ದು, ಸದರಿ ದಿನಾಂಕದಿಂದ ಕಲಂ 17(f) ಜಾರಿಯಲ್ಲಿರುತ್ತದೆ.

ಕಲಂ-33 ರಲ್ಲಿ ಉಪ ಪ್ರಕರಣ 33(4) ರಲ್ಲಿ "may be proved" ಬದಲಿಗೆ "shall be proved" ಎಂದು ತಿದ್ದುಪಡಿ ಮಾಡಲಾಗಿದೆ ಹಾಗೂ ಒಂದು ಪ್ರಾವಿಜನ್ ಅನ್ನು ಸೇರಿಸಲಾಗಿದ್ದು ಸದರಿ ತಿದ್ದುಪಡಿ ಈ ಕೆಳಗಿನಂತೆ ಇರುತ್ತದೆ:-

**Section-33 Power-of-attorney recognizable for purposes of Section 32.-**
(4) Any power-of-attorney mentioned in this section **shall be proved** by the production of it without further proof when it purports on the face of it to have been executed before and authenticated by the person or Court hereinbefore mentioned in that behalf.

**"Provided that a proof to the effect that the person executing the power of attorney is alive shall be produced as specified in the rules made under this Act."**

ಈ ಬಗ್ಗೆ ನಿಯಮಗಳನ್ನು ರಚಿಸಲಾಗಿ, ನಿಯಮ-67 & 171 ಕ್ಕೆ ತಿದ್ದುಪಡಿ ತರಲು ಕರಡು ನಿಯಮಗಳಿಗೆ ಸಾರ್ವಜನಿಕರಿಂದ ಸಲಹೆಗಳನ್ನು ಮತ್ತು ಆಕ್ಷೇಪಣೆಗಳನ್ನು ಅಧಿಸೂಚನೆ ಸಂಖ್ಯೆ:RD/50/MNMU/2025, Dated:02-02-2026 ರಲ್ಲಿ ಆಹ್ವಾನಿಸಲಾಗಿದ್ದು (ಪ್ರತಿ ಲಗತ್ತಿಸಿದೆ), ಸಾರ್ವಜನಿಕರಿಂದ ಸಲಹೆ ಮತ್ತು ಆಕ್ಷೇಪಣೆಗಳು ಸ್ವೀಕೃತವಾಗಿದ್ದು, ಮುಂದಿನ ಕ್ರಮವಹಿಸಲಾಗುತ್ತಿದೆ.

ಸದರಿ ನಿಯಮದಲ್ಲಿ ಪ್ರಕರಣ 17(f) ಗೆ ಸಂಬಂಧಿಸಿದಂತೆ ಅಧಿಕಾರ ಪತ್ರ (ಜಿಪಿಎ) ವನ್ನು ಸ್ವತ್ತನ್ನು ವರ್ಗಾವಣೆ /ಮಾರಾಟ ಮಾಡಲು ಪ್ರತಿಫಲದ ಮೊತ್ತ ಪಡೆದು ಅಥವಾ ಪಡೆಯದೆ ಅಧಿಕಾರ ಕೊಟ್ಟಲ್ಲಿ ಹಾಗೂ ಬರೆದುಕೊಡುವವರು ಭಾರತದಲ್ಲಿ ಇದ್ದರೆ ಸಂಬಂಧಪಟ್ಟ ಉಪ-ನೋಂದಣಿ ಕಛೇರಿಯಲ್ಲಿ ಜಿಪಿಎ ಪತ್ರವನ್ನು ನೋಂದಣಿ ಮಾಡಿಸಬೇಕಾಗಿರುತ್ತದೆ ಹಾಗೂ ಜಿಪಿಎ ಪತ್ರ ಬರೆದುಕೊಡುವವರು ಭಾರತದ ಹೊರಗೆ ಇದ್ದರೆ ಅಲ್ಲಿ ನೋಂದಣಿ ಮಾಡಿಸುವ ಅಗತ್ಯ ವಿರುವುದಿಲ್ಲ ಆದರೆ

ಸಂಭಂದಪಟ್ಟ ನೋಟರಿ ಪಬ್ಲಿಕ್ ಅಥವಾ ಭಾರತದ ರಾಯಭಾರಿ ಅಥವಾ ಉಪ ರಾಯಭಾರಿ ಅಥವಾ ಕೇಂದ್ರ ಸರ್ಕಾರದ ಪ್ರತಿನಿಧಿ ಯವರುಗಳ ಮುಂದೆ ಸಹಿ ಮಾಡಿ ದೃಢೀಕರಿಸಿಕೊಳ್ಳಬೇಕಾಗಿರುತ್ತದೆ.

ಸದರಿ ನಿಯಮದಲ್ಲಿ ನಿಯಮ 171 (xvii) ಅನ್ನು ಸೇರ್ಪಡಿಸಲಾಗಿದೆ (ಸದರಿ ನಿಯಮವು ದಸ್ತಾವೇಜನ್ನು ನೋಂದಣಿಯಿಂದ ತಿರಸ್ಕರಿಸುವ ಬಗ್ಗೆ ಇರುತ್ತದೆ).

ಪ್ರಕರಣ 33ಕ್ಕೆ ಸಂಬಂಧಿಸಿದಂತೆ ದಸ್ತಾವೇಜನ್ನು ಉಪನೋಂದಣಿ ಕಛೇರಿಯಲ್ಲಿ ಹಾಜರುಪಡಿಸಲು ಜಿಪಿಎ ಪತ್ರವನ್ನು ಬರೆದು ಕೊಟ್ಟಿದ್ದಲ್ಲಿ ಜಿಪಿಎ ಬರೆದುಕೊಟ್ಟ ವ್ಯಕ್ತಿಯು ಜೀವಂತವಾಗಿದ್ದಾರೆ ಎಂಬುದಕ್ಕೆ ಪುರಾವೆಯನ್ನು ಹಾಗೂ ಅಸಲು ಜಿಪಿಎ ಪತ್ರ ಸಲ್ಲಿಸಲು ವಿಫಲವಾದಲ್ಲಿ ನೋಂದಣಿಯನ್ನು ತಿರಸ್ಕರಿಸಬೇಕೆಂದು ನಿಯಮ ರಚಿಸಲಾಗಿರುತ್ತದೆ ಹಾಗೂ ಜಿಪಿಎ ಪತ್ರವನ್ನು ಅನೇಕ ಪತ್ರಗಳಿಗೆ ಅನ್ವಯಿಸುವಂತೆ ಬರೆದು ಕೊಟ್ಟಿದ್ದಲ್ಲಿ ಜಿಪಿಎ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸದೇ ಇದ್ದಲ್ಲಿ ನೋಂದಣಿಯನ್ನು ತಿರಸ್ಕರಿಸಬೇಕೆಂದು ನಿಯಮ ರಚಿಸಲಾಗಿರುತ್ತದೆ.

ಸದರಿ ನಿಯಮದಲ್ಲಿ ಜಿಪಿಎ ಬರೆದುಕೊಟ್ಟ ವ್ಯಕ್ತಿಯು ಜೀವಂತವಾಗಿದ್ದಾರೆ ಎಂಬ ಬಗ್ಗೆ (ಪುರಾವೆಯನ್ನು) ಜೀವಿತ ಪ್ರಮಾಣ ಪತ್ರವನ್ನು ನೀಡುವವರ ಬಗ್ಗೆ ವಿವರಿಸಲಾಗಿದೆ.

"(a) ಭಾರತದ ಯಾವುದೇ ಭಾಗದಲ್ಲಿ ವಾಸಿಸುತ್ತಿರುವ ಪವರ್ ಆಫ್ ಅಟಾರ್ನಿ ಬರೆದುಕೊಟ್ಟ ವ್ಯಕ್ತಿಯು ಜೀವಂತವಾಗಿದ್ದಾರೆ ಎಂದು ಮ್ಯಾಜಿಸ್ಟ್ರೇಟ್ ಅಥವಾ ಗಜೆಟೆಡ್ ಅಧಿಕಾರಿ ಅಥವಾ ಪೋಸ್ಟ್ ಮಾಸ್ಟರ್ ಅಥವಾ ಪೋಸ್ಟ್ ಆಫೀಸ್ ಇನ್ಸೆಕ್ಟರ್ ಅಥವಾ ಸಬ್-ಇನ್ಸೆಕ್ಟರ್ ದರ್ಜೆಗಿಂತ ಕಡಿಮೆ ಇಲ್ಲದ ಪೊಲೀಸ್ ಅಧಿಕಾರಿ ಅಥವಾ ತಹಶೀಲ್ದಾರ್ ಅಥವಾ ಸಹಾಯಕ ಕಂದಾಯ ಅಧಿಕಾರಿ ಅಥವಾ ಪಂಚಾಯತ್ ಅಭಿವೃದ್ಧಿ ಅಧಿಕಾರಿ (PDO) ಅಥವಾ ಮುಖ್ಯ ಅಧಿಕಾರಿ ಅಥವಾ ಕಾರ್ಪೊರೇಶನ್ ಕಮಿಷನರ್ ಅಥವಾ ಮುನ್ಸಿಪಲ್ ಕಮಿಷನರ್ ಅವರು ನೀಡಿದ ಜೀವಿತ ಪ್ರಮಾಣ ಪತ್ರ. ಅಂತಹ ಪ್ರಮಾಣ ಪತ್ರವನ್ನು ಅದು ನೀಡಲ್ಪಟ್ಟ ದಿನಾಂಕದಿಂದ 7 ದಿನಗಳ ಒಳಗೆ ಹಾಜರುಪಡಿಸತಕ್ಕದ್ದು: ಅಥವಾ UIDAI ಆಧಾರ್ ಆಧಾರಿತ ಮುಖ ಗುರುತಿಸುವಿಕೆ ತಂತ್ರಜ್ಞಾನ ವ್ಯವಸ್ಥೆಯ (Face Authentication) ಮೂಲಕ ಸೃಜಿಸಲಾದ ಡಿಜಿಟಲ್ ಜೀವಿತ ಪ್ರಮಾಣ ಪತ್ರ. ಇದನ್ನು ನೀಡಲ್ಪಟ್ಟ ದಿನಾಂಕದಿಂದ 3 ದಿನಗಳ ಒಳಗೆ ಹಾಜರುಪಡಿಸತಕ್ಕದ್ದು.

(b) ಭಾರತದ ಹೊರಗೆ ವಾಸಿಸುತ್ತಿರುವ ಪವರ್ ಆಫ್

| | | |
|---|---|---|
| | | ಅಟಾರ್ನಿ ಬರೆದುಕೊಟ್ಟ ವ್ಯಕ್ತಿಯು ಜೀವಂತವಾಗಿದ್ದಾರೆ ಎಂದು ನೋಟರಿ ಪಬ್ಲಿಕ್ ಅಥವಾ ಯಾವುದೇ ನ್ಯಾಯಾಲಯದ ನ್ಯಾಯಾಧೀಶರು, ಮ್ಯಾಜಿಸ್ಟ್ರೇಟ್ ಅಥವಾ ಭಾರತೀಯ ರಾಯಭಾರಿ ಅಥವಾ ಉಪ-ರಾಯಭಾರಿ ಅಥವಾ ಕೇಂದ್ರ ಸರ್ಕಾರದ ಪ್ರತಿನಿಧಿಯು ನೀಡಿದ ಜೀವಿತ ಪ್ರಮಾಣ ಪತ್ರ. ಅಂತಹ ಪ್ರಮಾಣ ಪತ್ರವನ್ನು ಅದು ನೀಡಲ್ಪಟ್ಟ ದಿನಾಂಕದಿಂದ 15 ದಿನಗಳ ಒಳಗೆ ಹಾಜರುಪಡಿಸತಕ್ಕದ್ದು" ಎಂದು ನಿಯಮ ರಚಿಸಲಾಗಿರುತ್ತದೆ. |
| ಆ) | ರಾಜ್ಯದಲ್ಲಿ ಈ ತಿದ್ದುಪಡಿಗಳನ್ನು ಯಾವ ದಿನಾಂಕದಿಂದ ಜಾರಿಗೊಳಿಸಲಾಗಿದೆ ಮತ್ತು ಇದರ ಪರಿಣಾಮವಾಗಿ ಉಪ ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ದಸ್ತಾವೇಜುಗಳ ನೋಂದಣಿಯು ಸುಸೂತ್ರವಾಗಿ ನಿರ್ವಹಿಸಲಾಗುತ್ತಿದೆಯೇ: (ಪೂರ್ಣ ಮಾಹಿತಿ ನೀಡುವುದು): | ರಾಜ್ಯದಲ್ಲಿ ಈ ತಿದ್ದುಪಡಿಯನ್ನು ಜಾರಿಗೊಳಿಸಿ, ಅಧಿಸೂಚನೆ ಸಂಖ್ಯೆ:DPAL 18 SHASANA 2025, ದಿನಾಂಕ:28-07-2025 ರಲ್ಲಿ ಆದೇಶ ಹೊರಡಿಸಲಾಗಿದ್ದು, ಸದರಿ ದಿನಾಂಕದಿಂದ ಕಲಂ 17(f) ಜಾರಿಯಲ್ಲಿರುತ್ತದೆ.<br><br>ಅಂದರೆ ದಿನಾಂಕ:28-07-2025 ರಿಂದ ಅಧಿಕಾರ ಪತ್ರದಲ್ಲಿ (ಜನರಲ್ ಪವರ್ ಆಫ್ ಅಟಾರ್ನಿ) ಅಧಿಕಾರ ಕೊಡುವವರು ಅವರ ಸ್ವತ್ತನ್ನು ವರ್ಗಾವಣೆ /ಮಾರಾಟ ಮಾಡಲು ಪರಿಗಣನೆ/ಪ್ರತಿಫಲದ ಮೊತ್ತ ಪಡೆದು ಅಥವಾ ಪಡೆಯದೆ ಅಧಿಕಾರ ಕೊಟ್ಟಲ್ಲಿ ಅಂತಹ ಅಧಿಕಾರ ಪತ್ರಗಳು ನೋಂದಣಿ ಮಾಡಬೇಕಾಗಿರುತ್ತದೆ.<br><br>ಇದರ ಪರಿಣಾಮವಾಗಿ ಉಪ ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ದಸ್ತಾವೇಜುಗಳ ನೋಂದಣಿಯು ಸುಸೂತ್ರವಾಗಿ ನಿರ್ವಹಿಸಲಾಗುತ್ತಿದೆ. |
| ಇ) | ನೋಂದಣಿ ಕಾಯಿದೆಗೆ ತಿದ್ದುಪಡಿ ತರುವ ಮುನ್ನ ನೋಂದಾಯಿಸಿದ ಜನರಲ್ ಪವರ್ ಆಫ್ ಅಟಾರ್ನಿಗಳ ಮುಖೇನ ನೋಂದಾಯಿಸಿದ ದಸ್ತಾವೇಜುಗಳನ್ನು ಕಾನೂನು ರೀತ್ಯಾ ರಕ್ಷಿಸಲು ತಿದ್ದುಪಡಿ ಕಾಯಿದೆಯಲ್ಲಿ ಕೈಗೊಂಡಿರುವ ಕ್ರಮಗಳು ಯಾವುವು: (ಸಂಪೂರ್ಣ ಮಾಹಿತಿ ನೀಡುವುದು): | ನೋಂದಾಯಿಸಿದ ಜನರಲ್ ಪವರ್ ಆಫ್ ಅಟಾರ್ನಿಗಳ ಮುಖೇನ ನೋಂದಾಯಿಸಿದ ದಸ್ತಾವೇಜುಗಳು ಕಾನೂನು ಬದ್ಧವಾಗಿರುತ್ತವೆ. ಇದರ ಬಗ್ಗೆ ಯಾವುದೇ ತಿದ್ದುಪಡಿ ತಂದಿರುವುದಿಲ್ಲ. |
| ಈ) | ಒಂದು ವೇಳೆ ತಿದ್ದುಪಡಿ ಕಾಯಿದೆಯಲ್ಲಿ ಅಗತ್ಯವಿರುವ ರಕ್ಷಣೆ ಒದಗಿಸಲು ಅವಕಾಶವಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಪರ್ಯಾಯ ಕ್ರಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು): | ಮೇಲಿನ ತಿದ್ದುಪಡಿಗೆ ಯಾವುದೇ ಪರ್ಯಾಯ ಕ್ರಮ ಕೈಗೊಳ್ಳುವ ಅಗತ್ಯವಿರುವುದಿಲ್ಲ. |

ಕಂಇ/**81**/ಎಂಎನ್ಎಸ್ಎ/**2026**

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

ವಿಶೇಷ ರಾಜ್ಯ ಪತ್ರಿಕೆ

| ಭಾಗ - ೪ಎ<br>Part – IVA | ಬೆಂಗಳೂರು, ಸೋಮವಾರ, ೨೮, ಜುಲೈ, ೨೦೨೫( ಶ್ರಾವಣ ,೦೬, ಶಕವರ್ಷ, ೧೯೪೭)<br>BENGALURU, MONDAY, 28, JULY, 2025 ( SHRAVANA , 06, SHAKAVARSHA, 1947) | ನಂ. ೪೧೭<br>No. 417 |
| --- | --- | --- |


## DEPARTMENT OF PARLIAMENTARY AFFAIRS AND LEGISLATION SECRETARIAT

### NOTIFICATION

### NO: DPAL 18 SHASANA 2025, BENGALURU, DATED: 28.07.2025

The Registration (Karnataka Amendment) Bill, 2025 ಇದಕ್ಕೆ 2025ರ ಜುಲೈ ತಿಂಗಳ 22ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2025ರ ಕರ್ನಾಟಕ ಅಧಿನಿಯಮ ಸಂಖ್ಯೆ:42 ಎಂಬುದಾಗಿ ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

### KARNATAKA ACT NO. 42 OF 2025

(First Published in the Karnataka Gazette Extra-ordinary on the 28th day of July 2025)

### THE REGISTRATION (KARNATAKA AMENDMENT) ACT, 2025

(Received the assent of the President on the 22nd day of July, 2025)

An Act further to amend the Registration Act, 1908 (Central Act 16 of 1908) in its application to the State of Karnataka.

Whereas it is expedient further to amend the Registration Act 1908 (Central Act 16 of 1908) in its application to the State of Karnataka for the purposes hereinafter appearing;

Be it enacted by the Karnataka State legislature in the Seventy Sixth year of the Republic of India as follows:-

**1. Short title and commencement.-** (1) This Act may be called the Registration (Karnataka Amendment) Act, 2025.

(2) It shall come into force on such date as the State Government may, by notification in the Official Gazette, appoint.

**2. Amendment of section 17.-** In the Registration Act, 1908 (Central Act 16 of 1908) (hereinafter referred to as the Principal Act), in section 17,-

(i) in sub-section (1), after clause (e), before the proviso, the following shall be inserted, namely:-

"(f) power of attorney authorizing transfer of immovable property with or without consideration:"

(ii) in sub-section (2), clause (vii) and the entries relating thereto shall be omitted."

**3. Amendment of section 33.-** In the Principal Act, in section 33, in sub-section (4),-

(i) for the words "may be proved", the words "shall be proved" shall be substituted; and

(ii) after sub-section (4) as so amended, the following proviso shall be inserted, namely:-

"Provided that a proof to the effect that the person executing the power of attorney is alive shall be produced as specified in the rules made under this Act."

**4. Amendment of Section 89.-** In the Principal Act, in section 89, after sub-section (4), the following shall be inserted, namely:-

"(5) The documents executed by the Government Officers or certain public functionaries as notified under section 88, shall send the documents electronically to the Registering Officer within whose jurisdiction, the whole or any part of the immovable property comprised in the documents is situated, and such officer shall file the said document electronically in his appropriate Book number and shall get the same preserved electronically "

By Order and in the name of
the Governor of Karnataka,

**G. SRIDHAR**
Secretary to Government
Department of Parliamentary
Affairs and Legislation

## ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವಾಲಯ

## ಅಧಿಸೂಚನೆ

**ಸಂಖ್ಯೆ: ಸಂವ್ಯಶಾಇ 18 ಶಾಸನ 2025, ಬೆಂಗಳೂರು, ದಿನಾಂಕ: 28.07.2025.**

ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ, 2022 (2023ರ ಕರ್ನಾಟಕ ಅಧಿನಿಯಮ ಸಂಖ್ಯೆ:13)ರ ಪ್ರಕರಣ 6 ರಡಿಯಲ್ಲಿ ಅಧಿಕೃತಗೊಳಿಸಿದ the Registration (Karnataka Amendment) Act, 2025 (Karnataka Act No.42 of 2025) ರ ಕನ್ನಡ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದ ವಿಶೇಷ ರಾಜ್ಯಪತ್ರಿಕೆ (ಭಾಗ-IV) ಯಲ್ಲಿ ಪ್ರಕಟಿಸಬೇಕೆಂದು ಆದೇಶಿಸಲಾಗಿದೆ,-

### 2025ರ ಕರ್ನಾಟಕ ಅಧಿನಿಯಮ ಸಂಖ್ಯೆ:-42

(2025 ರ ಜುಲೈ ತಿಂಗಳ 28ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

### ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2025

(2025 ರ ಜುಲೈ ತಿಂಗಳ 22ನೇ ದಿನಾಂಕದಂದು ರಾಷ್ಟ್ರಾಧ್ಯಕ್ಷರ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 17ರ ತಿದ್ದುಪಡಿ.-** ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 17ನೇ ಪ್ರಕರಣದಲ್ಲಿ,-

(i) (1)ನೇ ಉಪ-ಪ್ರಕರಣದಲ್ಲಿನ (ಇ) ಖಂಡದ ತರುವಾಯ ಪರಂತುಕಕ್ಕೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



"(ಎಫ್) ಪ್ರತಿಫಲದೊಂದಿಗೆ ಅಥವಾ ಇಲ್ಲದೆ ಸ್ಥಿರಾಸ್ತಿಯ ವರ್ಗಾವಣೆಯನ್ನು ಅಧಿಕೃತಗೊಳಿಸುವ ಮುಖ್ತ್ಯಾರನಾಮೆ (power of attorney)."

(ii) (2)ನೇ ಉಪ-ಪ್ರಕರಣದ (vii)ನೇ ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**3. ಪ್ರಕರಣ 33ರ ತಿದ್ದುಪಡಿ.**- ಮೂಲ ಅಧಿನಿಯಮದ 33ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ,-

(i) "ರುಜುವಾತುಪಡಿಸಬಹುದು" ಎಂಬ ಪದಗಳ ಬದಲಿಗೆ "ರುಜುವಾತುಪಡಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (4)ನೇ ಉಪ-ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಮುಖ್ತ್ಯಾರನಾಮೆಯನ್ನು ಬರೆದುಕೊಡುವ ವ್ಯಕ್ತಿಯು ಬದುಕಿರುವ ಕುರಿತು ಪುರಾವೆಯನ್ನು ಈ ಅಧಿನಿಯಮದಡಿ ಮಾಡಲಾದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಹಾಜರುಪಡಿಸತಕ್ಕದ್ದು."

**4. ಪ್ರಕರಣ 89ರ ತಿದ್ದುಪಡಿ.**- ಮೂಲ ಅಧಿನಿಯಮದ 89ನೇ ಪ್ರಕರಣದ (4)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) 88ನೇ ಪ್ರಕರಣದಲ್ಲಿ ಅಧಿಸೂಚಿಸಲಾದಂತೆ, ಸರ್ಕಾರಿ ಅಧಿಕಾರಿಗಳು ಅಥವಾ ಕೆಲವು ಸಾರ್ವಜನಿಕ ಕಾರ್ಯಕರ್ತರು ಬರೆದುಕೊಡುವ ದಸ್ತಾವೇಜುಗಳು, ಯಾರ ಸ್ಥಳೀಯ ಪರಿಮಿತಿಗಳೊಳಗೆ ದಸ್ತಾವೇಜಿನಲ್ಲಿ ಒಳಗೊಂಡಿರುವ ಸ್ಥಿರ ಸ್ವತ್ತಿನ ಸಂಪೂರ್ಣ ಅಥವಾ ಯಾವುದೇ ಭಾಗವು ಇರುವುದೋ ಆ ಅಧಿಕಾರವ್ಯಾಪ್ತಿಯ ನೋಂದಣಿ ಅಧಿಕಾರಿಗೆ ದಸ್ತಾವೇಜುಗಳನ್ನು ವಿದ್ಯುನ್ಮಾನವಾಗಿ ಕಳುಹಿಸತಕ್ಕದ್ದು, ಹಾಗೂ ಅಂಥ ಅಧಿಕಾರಿಯು ಆತನ ಯುಕ್ತ ಪುಸ್ತಕ ಸಂಖ್ಯೆಯಲ್ಲಿ ಸದರಿ ವಿದ್ಯುನ್ಮಾನ ದಸ್ತಾವೇಜನ್ನು ದಾಖಲಿಸತಕ್ಕದ್ದು ಮತ್ತು ವಿದ್ಯುನ್ಮಾನವಾಗಿ ಅದನ್ನು ಸಂರಕ್ಷಿಸತಕ್ಕದ್ದು.

The above translation of the Registration (Karnataka Amendment) Act, 2025 (Karnataka Act No. 42 of 2025) shall be an authoritative text in Kannada language under section 6 of the Kannada Language Comprehensive Development Act, 2022 (Karnataka Act No.13 of 2023).

**ಥಾವರ್‌ಚಂದ್ ಗೆಹ್ಲೋಟ್**
ಕರ್ನಾಟಕ ರಾಜ್ಯಪಾಲರು

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಜಿ. ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH

**GOVERNMENT OF KARNATAKA**

**No:** RD/50/MNMU/2025

Karnataka Government Secretariat,
Multi-storied Building,
Dr.B.R.AmbedkarVeedhi,
Bangalore, dated:02-02-2026.

**NOTIFICATION**

In exercise of the powers conferred by Sub -Section (1) of Section 69 of the Registration Act, 1908 (Central Act 16 of 1908) the Inspector General of Registration and Commissioner of Stamps for the State of Karnataka with the approval of the Government of Karnataka, hereby makes the following Amendments to the Karnataka Registration Rules, 1965 read with Section 23 of the Karnataka General Clauses Act-1899 (Karnataka Act III of 1899) is hereby published as required by Section 23 of the Karnataka General Clauses Act, 1899 for the information of all persons likely to be affected thereby and notice is hereby given that the said draft will be taken into consideration after the expiry of fifteen days from the date of its publication in Official Gazette.

Any objections or suggestions, may be received by the state government from any person with respect to the said draft before the expiry of the period specified above, will be considered by the State Government. Objections or suggestions may be addressed to the Principal Secretary to the Government, Revenue Department (Stamp and Registration and Disaster Management), 6th floor, M.S.building, Dr.B.R.Ambedkar Veedhi, Bengaluru 560001.

**DRAFT RULES**

**1. Title and Commencement.**- (1) These Rules may be called the Karnataka Registration (Amendment) Rules, 2025.

(2) They shall come into force from the date of their publication in the Official Gazette.

**2. Amendment of Rule 67.**- In the Karnataka Registration Rules, 1965 (hereinafter referred to as the said rules), in Rule 67, the existing clause shall be

numbered as Sub-Rule (1), and after Sub-Rule (1), as so numbered, the following shall be inserted, namely:-

"(2) For the purpose of Section 17 (f), Power-of-Attorney presented for registration containing a recital that the attorney holder is authorized to transfer the immoveable property with or without consideration and if the principal resides,-

(i) in any part of India, it shall be registered in the office of a Sub-Registrar;

(ii) outside India, it shall be executed before and authenticated by the Notary Public or any Court Judge, Magistrate or Indian Consul or Vice-Consul or representative of the Central Government and registration of such Power of Attorney is not necessary."

**3. Amendment of Rule 171.**- In Rule 171 of the said Rules, after Clause (xvi) and the entries relating thereto, the following shall be inserted, namely:-

"(xvii). Section 33, that the representative, assignee or agent authorized to present the document fails to produce proof that the person who executed the power of attorney is alive and where the original power of attorney or certified copy thereof, in case it is intended for multiple transactions, is not annexed to the document sort to be registered.

**Explanation:** For the purposes of this Clause, proof of life means,-

(a) A Life Certificate issued by Magistrate or Gazetted officer or Post Master or Inspector of Post office or Police officer not below the rank of Sub-Inspector or Tahsildar or Assistant Revenue officer or Revenue officer of the concerned local authorities or Panchayat Development officer or Chief officer of the Municipalities or Commissioner of the City Corporations or Muncipal Commissioner certifying that the person who has executed the power of attorney and now resides in any part of India is alive and such certificate shall be produced within seven days from the date of its issue; or Digital Life Certificate generated through the UIDAI Aadhaar based Face Authentication Technology System, certifying that the person who has executed the power of attorney and now resides in any part of India is alive and such certificate shall be produced within three days from the date of its issue.

(b) A Life Certificate issued by the Notary Public or any Court Judge, Magistrate or Indian Consul or Vice-Consul or representative of the

Central Government certifying that the person who has executed the power of attorney and now resides out of India is alive and such certificate shall be produced within fifteen days from the date of its issue."

By Order and in the name of the
Governor of Karnataka,

Sunitha S. 2/2/26
**(Sunitha.S)**
Under Secretary to Government
Revenue Department
(Stamps and Registration)

02-02-26

**To:** The Complier, Karnataka Gazette with a request to publish in the Special Gazette.

**Copies:**

1) The Principal Accountant General (A&E), Post Box No:5329, Park house Road, Karnataka, Bengaluru.
2) The Principal Secretary to Government, Finance Department, Vidhana Soudha, Bengaluru.
3) The Principal Secretary to Government, DPAR (e-Governance), M.S. Building, Bengaluru.
4) The Secretary to Government, DPAL, Vidhana Soudha, Bengaluru.
5) The Inspector General of Registration and Commissioner of Stamps, 8th Floor, K G Road, Bengaluru.
6) P S to Chief Secretary, Government of Karnataka, Vidhana Soudha, Bengaluru.
7) All District Registrars/ Head Quarters Assistant/ All Senior/ Sub Registrars (Through IGR).
8) P S to Hon'ble Revenue Minister, Vikasa Soudha, Bengaluru.
9) P.S. to Principal Secretary to Government, Revenue Department (DM, S & R, SS), M S Building, Bengaluru.
10) P A to Deputy Secretary to Government, Revenue Department (DM, S & R), M S Building, Bengaluru.
11) SGF/ Spare Copies.